# ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ.124/2026

| | | |
|---|---|---|
| ಸಾಕ್ಷಿದಾರರ ಹೆಸರು | ಸೀಮಾ ಬಾನು | ಸಿ.ಡಬ್ಲ್ಯು-1 |
| ಗಂಡನ ಹೆಸರು | ಸಾದಿಕ್ | ಪಿ .ಡಬ್ಲ್ಯೂ-1 |
| ವಯಸ್ಸು | 31 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಗೃಹಿಣಿ | ದಿನಾಂಕಃ |
| ವಾಸಃ | ಬಳಸಗೋಡು | 01.04.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ಚಾ.ಸಾ 2 ನನ್ನ ಗಂಡ. ಚಾ.ಸಾ 3 ನನ್ನ ಅತ್ತೆ. ಚಾ.ಸಾ 4 ರಿಂದ 6 ಗೊತ್ತು. ಆರೋಪಿತನು ನನ್ನ ಮೈದುನ. ಬಳಸಗೋಡು ಗ್ರಾಮದಲ್ಲಿ ನಾನು, ಚಾ.ಸಾ 2, 3 ಮತ್ತು ಆರೋಪಿತನು ಒಟ್ಟಿಗೆ ವಾಸವಾಗಿದ್ದೆವು. ನಮ್ಮನ್ನು ಮನೆಯಿಂದ ಹೊರ ಹೋಗುವಂತೆ ಆಗಾಗೆ ಆರೋಪಿತನು ನಮ್ಮೊಂದಿಗೆ ಗಲಾಟೆ ಮಾಡುತ್ತಿದ್ದನು. ನನ್ನ ಗಂಡ ಗ್ಯಾರೇಜ್ ನಲ್ಲಿ ಕೆಲಸ ಮಾಡುತ್ತಿದ್ದಾನೆ. ಆರೋಪಿತನು ಹೋಂ ಗಾರ್ಡ್ ಆಗಿದ್ದಾನೆ.

**2.** ದಿನಾಂಕ 17.10.2023 ರಂದು ರಾತ್ರಿ 10.00 ಗಂಟೆ ಸುಮಾರಿಗೆ ಚಾ.ಸಾ 2 ರವರು ಮನೆಯಲ್ಲಿ ಊಟ ಮಾಡುತ್ತಿದ್ದರು. ಆಗ ಆರೋಪಿತನು ನನ್ನ ಗಂಡ ಹಾಗೂ ನನ್ನನ್ನು ಕುರಿತು ನೀವು ಮನೆ ಬಿಟ್ಟು ಎಲ್ಲಿಯಾದರೂ ಹೋಗಿ ಎಂದು ಗಲಾಟೆ ತೆಗೆದನು. ನಂತರ ಚಾ.ಸಾ 2 ಮತ್ತು ಆರೋಪಿತನ ನಡುವೆ ಮಾತಿಗೆ ಮಾತು ಬೆಳೆದು ಜಗಳವಾಗಿದ್ದು, ಆರೋಪಿತನು ಚಾ.ಸಾ 2 ರವರಿಗೆ ಕೈಯಿಂದ ಹೊಡೆದು, ಬಾಯಿಂದ ಕುತ್ತಿಗೆ ಮತ್ತು ಮೈ ಕೈಗೆ ಕಚ್ಚಿದನು. ಚಾ.ಸಾ 2 ರವರನ್ನು ಆರೋಪಿತನು ಕೆಳಗೆ ಬೀಳಿಸಿ ಕೈಯಿಂದ ಕುತ್ತಿಗೆಯನ್ನು ಹಿಚುಕುತ್ತಿದ್ದನು. ನಾನು ಗಲಾಟೆ ಬಿಡಿಸಲು ಹೋದಾಗ ಅಣ್ಣ ತಮ್ಮಂದಿರ ಮಧ್ಯೆ ನೀವೇಕೆ ಬರುತ್ತೀರಾ ಎಂದು ನನ್ನ ಕೈ ಹಿಡಿದು ಎಳೆದು ಬೀಳಿಸಿ, ಅವಮಾನ ಮಾಡಿದನು. ಆರೋಪಿತನು ನನ್ನನ್ನು ಬೀಳಿಸಿದಾಗ ನಾನು ಮಂಚದ ಮೇಲೆ ಬಿದ್ದಾಗ ನನ್ನ ಹೊಟ್ಟೆಗೆ ಮಂಚ ತಾಗಿ ನೋವುಂಟಾಗಿರುತ್ತದೆ. ಆಗ ನಾನು ಕೂಗಿಕೊಂಡಾಗ ಆರೋಪಿತನು ತನ್ನ

ಬಳಿ ಇದ್ದ ಕೋಲಿನಿಂದ ಚಾ.ಸಾ 2 ರವರಿಗೆ ಹೊಡೆದನು. ಚಾ.ಸಾ 3 ಮತ್ತು ಚಾ.ಸಾ 4 ರವರು ಬಂದು ಗಲಾಟೆ ಬಿಡಿಸಿದರು.

**3.** ಮರು ದಿನ ಬೆಳಿಗ್ಗೆ 10.00 ಗಂಟೆಗೆ ಪುನಃ ಮತ್ತು ಆರೋಪಿತನ ನಡುವೆ ಜಗಳ ಉಂಟಾಗಿರುತ್ತದೆ. ಆಗ ಆರೋಪಿತನು ನೀವು ಮನೆಗೆ ಬರಬೇಡಿ, ಪುನಃ ಮನೆಗೆ ಬಂದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದನು. ಆಗ ನಾನು ಮತ್ತು ಚಾ.ಸಾ 2 ರವರು ಸಾಗರದ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ. ಆಸ್ಪತ್ರೆಯಲ್ಲಿ ಪೋಲಿಸರು ಬಂದು ನನ್ನ ಹೇಳಿಕೆಯನ್ನು ಪಡೆದರು. ದಿನಾಂಕ 19.03.2023 ರಂದು ಬೆಳಿಗ್ಗೆ 10.00 ಗಂಟೆಗೆ ಪೋಲಿಸರು ಘಟನಾ ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ಮಾಡಿದರು. ಆಗ ಚಾ.ಸಾ 5 ಮತ್ತು 6 ರವರು ಪಂಚರಾಗಿ ಹಾಜರಿದ್ದರು. ಪಂಚನಾಮೆ ಕಾಲಕ್ಕೆ ಪೋಲಿಸರು ಫೋಟೋ ತೆಗೆದು, ನಕ್ಷೆ ಬಿಡಿಸಿದರು. ಆರೋಪಿತನು ಹಲ್ಲೆ ಮಾಡಲು ಬಳಸಿದ ಬಿದರಿನ ಕೋಲನ್ನು ಅಮಾನತ್ತು ಪಡಿಸಿಕೊಂಡರು. ನಂತರ ದಿನಾಂಕ ಪೋಲಿಸರು ನನ್ನನ್ನು ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದ್ದು, ನಾನು ಘಟನೆಯ ಕುರಿತು ನ್ಯಾಯಾಧೀಶರ ಕೊಠಡಿಯಲ್ಲಿ ನನ್ನ ಹೇಳಿಕೆಯನ್ನು ನೀಡಿದ್ದೇನೆ.

**4.** ದೂರನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು, ಸ್ಥಳ ಪಂಚನಾಮೆಯನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು, ನಕ್ಷೆಯನ್ನು ನಿಪಿ–3 ಎಂದು, ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು, 2 ಫೋಟೋಗಳನ್ನು ನಿಪಿ–4 ಮತ್ತು 5 ಎಂದು, ದಂ. ಪ್ರ. ಸ. ಕಲಂ 164 ರ ಹೇಳಿಕೆಯನ್ನು ನಿಪಿ–6 ಎಂದು ಗುರುತಿಸಲಾಯಿತು. ಸದರಿ ಹೇಳಿಕೆಯಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಬಿದರಿನ ದೊಣ್ಣೆಯನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ ಸದರಿ ದೊಣ್ಣೆಯನ್ನು ಮು.ಮಾಲು–1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ರವರಿಂದಃ–</u>**

**1.** ಆಸ್ತಿ ಹಾಗೂ ಮನೆ ವಿಚಾರಕ್ಕಾಗಿ ನನ್ನ ಗಂಡ ಹಾಗೂ ಆರೋಪಿತನ ನಡುವೆ ಆಗಾಗ ಜಗಳವಾಗುತ್ತಿತ್ತು ಎಂದರೆ ಸರಿ. ಮುಂದುವರೆದು ಆರೋಪಿತನು ನಮ್ಮನ್ನು ಮನೆ ಬಿಟ್ಟು ಹೋಗು ಎಂದು ಹೇಳುತ್ತಿದ್ದರಿಂದ ಗಲಾಟೆಯಾಗುತ್ತಿತ್ತು ಎಂದು ನುಡಿಯುತ್ತಾರೆ. ದಿನಾಂಕ 17.10.2023 ರಂದು ಹಾಗೂ ಅದರ ಪೂರ್ವದಲ್ಲಿ ನಾನು, ಆರೋಪಿತನು, ಚಾ.ಸಾ 2 ಮತ್ತು 3 ರವರು ಒಂದೇ ಮನೆಯಲ್ಲಿ ವಾಸ ಮಾಡುತ್ತಾ ಬಂದಿದ್ದೆವು. ದಿನಾಂಕ 17.10.2023 ರ ಪೂರ್ವದಲ್ಲಿ ಆರೋಪಿತನ

ವಿರುದ್ಧ ನಾವು ದೂರನ್ನು ನೀಡಲಿಲ್ಲ. ಕಾರಣ ನಾವು ಮನೆಯಿಂದ ಹೊರಗೆ ಹೋದರೆ ಆರೋಪಿತನು ನಮ್ಮನ್ನು ಪುನಃ ಮನೆಯ ಒಳಗೆ ಬಿಟ್ಟು ಕೊಳ್ಳದೆ ಇದ್ದರೆ ತೊಂದರೆ ಆಗುತ್ತದೆ ಎನ್ನುವ ಕಾರಣದಿಂದ ನಾವು ಹೊರಗೆ ಹೋಗಿಲ್ಲ ಎನ್ನುತ್ತಾರೆ. ಆಸ್ಪತ್ರೆಗೆ ನಾನು ಮತ್ತು ಚಾ.ಸಾ 2 ರವರು ಆಟೋ ಮೂಲಕ ಹೋದೆವು. ನನಗೆ ಏನೆಲ್ಲಾ ಆಯಿತು ಎಂದು ವೈದ್ಯರ ಮುಂದೆ ಹೇಳಿದ್ದೇನೆ. ನಾವು ಈಗ ವಾಸವಾಗಿರುವ ಮನೆ ಚಾ.ಸಾ 3 ರವರ ಹೆಸರಿನಲ್ಲಿ ಇದೆ ಎನ್ನುವುದು ಸರಿಯಲ್ಲ. ಸದರಿ ಮನೆಯಲ್ಲಿ ಪಾಲು ಕೊಡಬೇಕು ಎಂದು ನಾನು ಮತ್ತು ಚಾ.ಸಾ 2 ರವರು ಚಾ.ಸಾ 3 ರವರೊಂದಿಗೆ ಜಗಳ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಅದನ್ನು ಪ್ರಶ್ನಿಸಿದ್ದಕ್ಕೆ ಆರೋಪಿತನ ವಿರುದ್ಧ ಈ ಸುಳ್ಳು ದೂರನ್ನು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

**2.** ಚಾ.ಸಾ 3 ರವರು ಈಗ ಆರೋಪಿತನೊಂದಿಗಲೆ ವಾಸವಾಗಿದ್ದಾರೆ. ಸಾಗರದ 1 ನೇ ಹೆಚ್ಚುವರಿ ಸಿವಿಲಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಚಾ.ಸಾ 2 ರವರು ಒ ಎಸ್ 116/2025 ರಂತೆ ಆರೋಪಿತನ ವಿರುದ್ಧ ಪಾಲು ವಿಭಾಗಕ್ಕಾಗಿ ದಾವೆ ಸಲ್ಲಿಸಿದ್ದಾರೆ ಎಂದರೆ, ಇರಬಹುದು. ಆರೋಪಿತನು ರಾತ್ರಿ ಪಾಳಿ ಕೆಲಸಕ್ಕೆ ಹೋಗುತ್ತಾನೆ. ಚಾ.ಸಾ 3 ರವರ ಆಸ್ತಿಯನ್ನು ಕಬಳಿಸಲು ಉದ್ದೇಶಿಸಿ ನಾನು ಮತ್ತು ಚಾ.ಸಾ 2 ರವರು ಕೂಡಿ ಸುಳ್ಳು ದೂರನ್ನು ದಾಖಲು ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಬಳಸಗೋಡು ಇದು ಗ್ರಾಮೀಣ ಪ್ರದೇಶ ಎಂದರೆ ಸರಿ. ಸಾಮಾನ್ಯವಾಗಿ ಎಂ.ಒ-1 ರಂತಹ ಕೋಲುಗಳು ಗ್ರಾಮೀಣ ಪ್ರದೇಶದಲ್ಲಿ ಸಿಗುತ್ತವೆ ಎಂದರೆ ಸರಿ. ನಾನು ಹೇಳಿದಂತೆ ಆರೋಪಿತನು ನನಗಾಗಲೀ, ಚಾ.ಸಾ 2 ರವರಿಗಾಗಲೀ ಹಲ್ಲೆ ಮಾಡಿ ಅವಾಚ್ಯವಾಗಿ ಬೈಯ್ದು ಜೀವ ಬೆದರಿಕೆ ಹಾಕಿಲ್ಲ ಎನ್ನುವುದು ಸರಿಯಲ್ಲ. ಆರೋಪಿತನಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು

ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.